ಕುಂದಲತ ತಾರಾನಾಥ ಎಂಬಿತ್ಯಾದಿ ವ್ಯಕ್ತಿ ನಾಮಗಳನ್ನು ಬಳಸಲು ಪ್ರಮುಖ ಕಾರಣವೆಂದರೆ, ಕೇರಳ ಸಂಪ್ರದಾಯದಲ್ಲಿ ಅನುಸರಿಸದ ಕೆಲವು ರೀತಿ ನೀತಿಗಳು ಇದರಲ್ಲಿ ಎಲ್ಲಿಯಾದರೂ ಕಾಣುವುದು ಸಾಧ್ಯವಾದರೆ, ಈ ಕತೆ ಕೇರಳದಿಂದ ತುಂಬಾ ದೂರದಲ್ಲಿರುವ ಬೇರೊಂದು ದೇಶದಲ್ಲಿ ನಡೆದುದೆಂದು ಹೇಳಿದರೆ, ಅದು ಆ ದೇಶದ ನಡಾವಳಿಗಳೆಂದು ಓದುಗರು ನೆನಪಿಟ್ಟುಕೊಳ್ಳಲಿ ಎಂಬುದಕ್ಕೆ ಮಾತ್ರ. ಆದರೆ, ಈ ಕತೆ ಪುರಾಣ ಪ್ರಸಿದ್ಧವಾದ ಆ ದೇಶಗಳಿಗೆ ಸರಿಯಾಗಿ ಹೊಂದಬೇಕೇ ಹೊರತು ಈಗ ಬೇರೆ ಹೆಸರುಗಳನ್ನು ಹೇಳುವ ದೇಶಗಳಲ್ಲಿ ಸಂಭವಿಸಿದೆ ಎಂದು ಓದುಗರು ತಿಳಿಯುವಂತಾಗಬಾರದು.'

ಈ ಮಾತುಗಳ ಹಿಂದೆ ಇರುವ ಧ್ವನಿಯನ್ನು ನಾವು ಗಮನಿಸಬೇಕು. ಯಾವುದೇ ಒಂದು ಕಲಾಕೃತಿ ದೇಶ ಕಾಲಗಳನ್ನು ಮೀರಬೇಕು. ಜೊತೆಗೆ ಅದು ತತ್ಕಾಲೀನತೆ, ಸಾರ್ವತ್ರಿಕತೆ ಮತ್ತು ಸಾರ್ವಕಾಲೀಕತೆಯನ್ನು ಒಳಗೊಳ್ಳಬೇಕು. ಹೀಗಾಗಬೇಕಾದರೆ ಭಾಷೆ ಮತ್ತು ತಂತ್ರದಲ್ಲಿ ಇವೆಲ್ಲವೂ ಒಳಗೊಳ್ಳಬೇಕು. ಅಂದರೆ, ಸಾವಯವ ಸಮಗ್ರೀಕರಣವಾಗಬೇಕು. ಆ ರೀತಿ ಆಗಬೇಕಾದರೆ ಕಾದಂಬರಿಯಲ್ಲಿ ಒಂದು ತಂತ್ರವಾಗಿ ಸ್ಥಳ ಮತ್ತು ವ್ಯಕ್ತಿ ನಾಮಗಳ ಬದಲಾವಣೆ ಮಾಡಿಕೊಳ್ಳುವ ಪ್ರಯತ್ನ ನಡೆಯುತ್ತದೆ. ಅಪ್ಪುನೆಡುಙಾಡಿಯವರು ಅದಕ್ಕಾಗಿಯೇ ಬದಲಾವಣೆ ಮಾಡಿಕೊಂಡಿದ್ದಾರೆ. ಜೊತೆಗೆ ಆಗಿನ ಬಹುತೇಕ ಭಾರತೀಯ ಕಾದಂಬರಿಗಳು ಸ್ಥಳೀಯತೆಯನ್ನು ತಳ್ಳಿಹಾಕಿದವು. ಈ ಕಾದಂಬರಿಯೂ ಸಹ ಇದಕ್ಕೆ ಹೊರತಾಗಿಲ್ಲ. ಇದಕ್ಕೆ ಕಾರಣ, ರಾಷ್ಟ್ರೀಯತೆಯ ಮನೋಭಾವನೆಯನ್ನು ಬಿತ್ತಬೇಕಾಗಿತ್ತು. ಆದ್ದರಿಂದಲೇ ಮೊದಲು ಭಾರತದಲ್ಲಿ ಸಾಮಾಜಿಕ ಕಾದಂಬರಿಗಳಿಗಿಂತ ಚಾರಿತ್ರಿಕ ಕಾದಂಬರಿಗಳು ಕಾಣಿಸಿಕೊಂಡವು. ಭಾರತೀಯ ಸಂಸ್ಕೃತಿಯ ಬಗ್ಗೆ ಕಳೆದುಕೊಂಡಿದ್ದ ಪ್ರತಿಷ್ಠೆಯನ್ನು ಪುನಃ ಗಳಿಸಿಕೊಳ್ಳಬೇಕಿತ್ತು. ಸರ್ ವಾಲ್ಟರ್‌ಸ್ಕಾಟ್, ಅಲೆಕ್ಸಾಂಡರ್ ಡೂಮಾ ಮತ್ತು ಜೂಲ್ಸ್‌ವರ್ನ್‌ರ ಚಾರಿತ್ರಿಕ ಕಾದಂಬರಿಗಳಿಂದ ಪ್ರತ್ಯಕ್ಷವಾಗಿ ಪರೋಕ್ಷವಾಗಿ ಪ್ರಭಾವಿತರಾಗಿದ್ದರೂ ಭಾರತೀಯ ಲೇಖಕರು ಅವರಿಗಿಂತ ಭಿನ್ನವಾದ ಸಂವೇದನೆಯನ್ನು ಹೊಂದಿದ್ದರು. ಉದಾಹರಣೆಗೆ ವಾಲ್ಟರ್‌ಸ್ಕಾಟ್, ರಾಷ್ಟ್ರಭಾವನೆಯನ್ನು ಪುನರುಜ್ಜೀವನಗೊಳಿಸಲು ಪ್ರಯತ್ನಿಸಲಿಲ್ಲ. ಆದರೆ, ಭಾರತೀಯ ಲೇಖಕರಾದ ಬಂಕಿಮಚಂದ್ರರು, ರಾಖಲ್‌ದಾಸ್ ಬ್ಯಾನರ್ಜಿ, ಹರಿನಾರಾಯಣ ಆಪ್ಟೆ, ಬಿ. ವೆಂಕಟಾಚಾರ್ಯ, ಕೆರೂರು ವಾಸುದೇವಾಚಾರ್ಯ, ಗಳಗನಾಥ ಮುಂತಾದವರು ರಾಷ್ಟ್ರಭಾವನೆಯನ್ನು ಉದ್ದೀಪಿಸುವಂತಹ ಕೆಲಸವನ್ನು ಮಾಡಿದರು. ಸ್ಥಳೀಯ ಚರಿತ್ರೆಗಳ ಘಟನೆಗಳೊಂದಿಗೆ ಪುರಾಣದ ಹೆಸರು, ಸ್ಥಳನಾಮಗಳನ್ನು ತಂದರು. ಆದರೆ, ಆಗಿನ ಕಾಲದ ಬಹಳಷ್ಟು ಕಾದಂಬರಿಗಳಲ್ಲಿ ಜೀವನದ ಸಂಕೀರ್ಣ ಸ್ವರೂಪವನ್ನು ಸಮರ್ಥವಾಗಿ ಹಿಡಿದಿಡಲು ಸಾಧ್ಯವಾಗಿಲ್ಲ. ಆದರೆ, ಸಾಮಾಜಿಕ ಕಾದಂಬರಿಗಳು ಈ ಕೆಲಸವನ್ನು ಮಾಡುವಲ್ಲಿ ಯಶಸ್ವಿಯಾದವು. 'ಕುಂದಲತ' ಕಾದಂಬರಿಯಲ್ಲೂ ಜೀವನದ ಸಂಕೀರ್ಣತೆಯ ಸ್ವರೂಪದ ಅನಾವರಣ ಮಾಡಲು ಸಾಧ್ಯವಾಗದಿರುವುದಕ್ಕೆ ಮೇಲ್ಕಾಣಿಸಿದ ಕಾರಣಗಳು ಇರಬಹುದು. ಆದರೆ, ರಾಷ್ಟ್ರೀಯತೆ, ಪ್ರೇಮ ಮತ್ತು ಪ್ರಕೃತಿ, ಯುದ್ಧದ ನಿರಾಕರಣೆ, ಸೌಹಾರ್ದತೆ, ಸಹಬಾಳ್ವೆ, ಅವಿಭಕ್ತ ಕುಟುಂಬದ ಕಲ್ಪನೆ ಇತ್ಯಾದಿ ವಿಚಾರಗಳನ್ನು ಧ್ವನಿಪೂರ್ಣವಾಗಿ ವ್ಯಕ್ತಪಡಿಸಲಾಗಿದೆ.

ವ್ಯಕ್ತಿಯೊಬ್ಬನನ್ನು ಸಾಮಾಜಿಕವಾಗಿ ಮತ್ತು ರಾಜಕೀಯವಾಗಿ ಅಧೀನಗೊಳಿಸುವುದರ ಮೂಲಕ ಗುಲಾಮನನ್ನಾಗಿ ಮಾಡಿಕೊಳ್ಳುವುದು ವಸಾಹತುಶಾಹಿಯ ಒಂದು ಲಕ್ಷಣ. ಇಲ್ಲಿ ವ್ಯಕ್ತಿಗಳ ವ್ಯಕ್ತಿತ್ವವನ್ನು ಬಂದಿಯಾಗಿಸುವಂತಹ ಕೆಲಸ ನಡೆಯುತ್ತದೆ. ಆದ್ದರಿಂದಲೇ ಗುಲಾಮಗಿರಿ ಬೆಳೆಯುತ್ತ ಹೋಗುತ್ತದೆ. 1843ರಲ್ಲಿ ಭಾರತದಲ್ಲಿ ಗುಲಾಮಗಿರಿಯನ್ನು ನಿಷೇಧಿಸಲಾಯಿತು. ಆದರೂ ವಸಾಹತು ಕಾಲದಲ್ಲಿ ಇಡೀ ರಾಷ್ಟ್ರವೇ ಅದಕ್ಕೆ ಬಲಿಯಾಗಿದೆ ಎಂಬ ಭಾವನೆ ಬಲವಾಗಿ